ಆದರೆ ಬೇರೆ ಜಿಲ್ಲೆಯಲ್ಲಿ ನಮ್ಮ ಆಕ್ಷನ್ನು ಅಳವಡಿಸಿಲ್ಲ. ಆದ್ದರಿಂದ ಅದರ ಬಿಡುಗಡೆ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಡಿ.ವಿ. ಸದಾನಂದ ಗೌಡ:- ಮಾನ್ಯ ಮಂತ್ರಿಗಳು ಕೇಳಿದ ರೀತಿಯಲ್ಲಿ ಕೊಲ್ಲೂರು, ಸುಬ್ರಹ್ಮಣ್ಯ ಇಂತಹ ಕ್ಷೇತ್ರಗಳಲ್ಲಿ ವಿಶೇಷವಾದಂತಹ ಅಧಿಕಾರವನ್ನು ಅಲ್ಲಿಯ ದೇವಸ್ಥಾನಗಳಿಗೆ ಕೊಟ್ಟಿದ್ದಾರೆ. ಅದು ಏನು ಅಂದರೆ ಅಲ್ಲಿ ಬರುವಂತಹ ಉತ್ಪತ್ತಿಯಲ್ಲಿ ಸ್ವಲ್ಪಾಂಶವನ್ನು ಆ ಭಾಗದಲ್ಲಿರುವಂತಹ ವಿವಿಧ ಧಾರ್ಮಿಕ ಕ್ಷೇತ್ರಗಳಿಗೆ ಕೊಡ ಮಾಡುವಂತಹ ಒಂದು ವಿಶೇಷ ಅಧಿಕಾರವನ್ನು ಕೊಟ್ಟಿದ್ದಾರೆ. ಈಗಾಗಲೇ ಕೊಟ್ಟಂತಹ ಅಧಿಕಾರವನ್ನು ಇನ್ನಷ್ಟು ಸ್ವಲ್ಪ ಹೆಚ್ಚು ಮಾಡಬೇಕೆಂಬ ವಿನಂತಿ ನನ್ನದು. ಏಕೆಂದರೆ ಆಯಾಯ ಭಾಗದಲ್ಲಿ ಇರುವಂತಹದು. ಸುಬ್ರಹ್ಮಣ್ಯ ಪರಿಸರದಿಂದ ದಕ್ಷಿಣ ಭಾಗದ ಜಿಲ್ಲೆಗಳಿಗೆಲ್ಲಾ ಕೊಡಲಿಕ್ಕೆ ಅವಕಾಶ ಇದೆ.

ಅಧ್ಯಕ್ಷರು:- ಧರ್ಮಸ್ಥಳ ದೇವಸ್ಥಾನದವರು ಚಿಕ್ಕ ಪುಟ್ಟ ದೇವಸ್ಥಾನಗಳಿಗೆ ಕೊಡಬಹುದು.

ಶ್ರೀ ಡಿ.ವಿ. ಸದಾನಂದ ಗೌಡ:- ಧರ್ಮಸ್ಥಳ ಅದು ಪ್ರತ್ಯೇಕ. ಅದು ಇವರ ವ್ಯಾಪ್ತಿಗೆ ಬರುವುದಿಲ್ಲ. ಆದರೆ ಸುಬ್ರಹ್ಮಣ್ಯ, ಕೊಲ್ಲೂರು ಎಲ್ಲಾ ಇವರ ವ್ಯಾಪ್ತಿಯಲ್ಲಿ ಬರುವಂತಹದು. ಇವರ ವ್ಯಾಪ್ತಿಯಲ್ಲಿ ಬರುವಂತಹ ಆದಾಯದಲ್ಲಿ ಶೇಕಡಾ 50 ಭಾಗವನ್ನು ಆ ಜಿಲ್ಲೆಯಲ್ಲಿರುವಂತಹ ವಿವಿಧ ದೇವಾಲಯಗಳಿಗೆ ಅಭಿವೃದ್ಧಿಗೆ ಕೊಡಲಿಕ್ಕೆ ವಿಶೇಷವಾದ ಅಧಿಕಾರವನ್ನು ಸರ್ಕಾರ ಕೊಟ್ಟರೆ ಬಹುಶಃ ಎಲ್ಲಾ ಧಾರ್ಮಿಕ ಕ್ಷೇತ್ರಗಳಲ್ಲಿ ಒಳ್ಳೆಯದಾಗಬಹುದು.

ಶ್ರೀ ಎ.ಎಸ್. ಗುರುಸ್ವಾಮಿ:- ಸಾರ್, ನನ್ನ ಪ್ರಶ್ನೆಗೆ ಉತ್ತರ ಬರಲಿಲ್ಲ.

ಅಧ್ಯಕ್ಷರು:- ಹೇಳಿದ್ದಾರೆ. ಆಕ್ಕ ಪಕ್ಕದಲ್ಲಿರುವ ದೇವಸ್ಥಾನಗಳವರು ಬೇರೆ ದೇವಸ್ಥಾನಕ್ಕೆ ಕೊಟ್ಟರೆ ನಮ್ಮದೇನೂ ಅಭ್ಯಂತರ ಇಲ್ಲ ಎಂದು ಹೇಳಿದರು.

ಶ್ರೀ ಎ.ಎಸ್. ಗುರುಸ್ವಾಮಿ:- ಅವರು ಬಡ ದೇವರ ಬಗ್ಗೆ ಹೇಳಲಿಲ್ಲ. ದೇವರಲ್ಲೂ ಬಡ ದೇವರು ಇದ್ದಾರೆ. ಅದರ ಬಗ್ಗೆ ಅವರು ಹೇಳಲಿಲ್ಲ.

ಅಧ್ಯಕ್ಷರು:-ಎಲ್ಲಾ ಬಡ ದೇವರೇ, ಧರ್ಮಸ್ಥಳ, ತಿರುಪತಿ ಬಿಟ್ಟು ಬಿಟ್ಟರೆ ಎಲ್ಲಾ ದೇವರು ಬಡ ದೇವರೇ.

ಶ್ರೀಮತಿ ಸುಮಾವಸಂತ್:- ಸನ್ಮಾನ್ಯ ಸಭಾಧ್ಯಕ್ಷರೆ, ಸಾಧಾರಣವಾಗಿ ದೇವಸ್ಥಾನಗಳ ಅಭಿವೃದ್ಧಿಗೆ ಸಾರ್ವಜನಿಕರಿಂದ ದೇಣಿಗೆ ಪಡೆಯಬೇಕು. ಜನಗಳು ಮನಸ್ಸು ಮಾಡಬೇಕು ಸಾರ್ವಜನಿಕರಿಂದ ದೇಣಿಗೆ ತೆಗೆದುಕೊಂಡು ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಬೇಕಾಗುತ್ತದೆ. ಅಲ್ಪಸ್ವಲ್ಪ ಮಾತ್ರ ನಾವು ಸರ್ಕಾರದಿಂದ ಅವರಿಗೆ ಜೀರ್ಣೋದ್ಧಾರಕ್ಕೆ ಅನುದಾನವನ್ನು ಕೊಡುತ್ತಿದ್ದೇವಷ್ಟೇ.

ಯುವ ಡಾಟ್ ಕಾಮ್‌ನಲ್ಲಿ ನಕಲಿಜಾಲ

100 (1197) ಶ್ರೀ ಎನ್.ಹೆಚ್. ಶಿವಶಂಕರ ರೆಡ್ಡಿ (ಗೌರಿಬಿದನೂರು) : ಮಾನ್ಯ ಬೃಹತ್ ಹಾಗೂ ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಯುವ ಡಾಟ್ ಕಾಂ ನಲ್ಲಿ ಅಸಲಿ ವಿದ್ಯಾರ್ಥಿಗಳಿಗಿಂತಲೂ ನಕಲಿ ವಿದ್ಯಾರ್ಥಿಗಳ ಹಾವಳಿಯೇ ಅಧಿಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ನಕಲಿ ವಿದ್ಯಾರ್ಥಿಗಳ ಜಾಲ ಹೆಚ್ಚಾಗಲು ಸಹಕರಿಸಿದಂತಹ ಅಧಿಕಾರಿಗಳ ವಿರುದ್ಧ ಕೈಗೊಳ್ಳುವ ಕ್ರಮವೇನು;

ಇ) ಮುಂದೆ ಇಂತಹ ನಕಲಿ ಜಾಲಗಳ ಹಾವಳಿಯು ಹೆಚ್ಚಾಗದಂತೆ ಸೂಕ್ತ ಬಂದೂಬಸ್ತ್ ಮಾಡಲಾಗುವುದೇ?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಹಾಗೂ ಮಧ್ಯಮ ಕೈಗಾರಿಕಾ ಸಚಿವರು):

ಅ) ಬಂದಿರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಸರ್ಕಾರದ ಆದೇಶ ಸಂಖ್ಯೆ ಮಾತಂಇ 24 ನೀಸಂವಿ 2000 ದಿನಾಂಕ 07.12.2000 ರಂತೆ ಯೋಜನೆಯ ಮೇಲ್ವಿಚಾರಣೆ ಮಾಡಲು ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಯ ಅಧ್ಯಕ್ಷತೆಯಲ್ಲಿ ಸಮಿತಿಗಳನ್ನು ರಚಿಸಿಲಾಗಿದೆ. ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಂಟಿ ನಿರ್ದೇಶಕರು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಮತ್ತು ಜಿಲ್ಲಾ ಪಂಚಾಯತಿಯ ಯೋಜನಾ ನಿರ್ದೇಶಕರು ಡಿಆರ್‌ಡಿಎ/ ಎಸ್‌ಜೆಎಸ್‌ವೈ ಗಳಿಗೆ ಸಹ ಈ ಯೋಜನೆಯ ಅನುಷ್ಠಾನದ ಮೇಲ್ವಿಚಾರಣೆ ನಡೆಸುವ ಅಧಿಕಾರವನ್ನು ನೀಡಲಾಗಿದೆ. ಇದಲ್ಲದೆ ಮಾಹಿತಿ ತಂತ್ರಜ್ಞಾನ ಇಲಾಖೆಯ ಅಧಿಕಾರಿಗಳಿಗೆ ತಲಾ ಎರಡು ಜಿಲ್ಲೆಗಳ ಮೇಲ್ವಿಚಾರಣೆಯ ಜವಾಬ್ದಾರಿಯನ್ನು ವಹಿಸಲಾಗಿದೆ.

ಶ್ರೀ ಎಸ್.ಎಚ್. ಶಿವಶಂಕರ್ ರೆಡ್ಡಿ:- ಮಾನ್ಯ ಅಧ್ಯಕ್ಷರೆ, ಉತ್ತರವನ್ನು ನೀಡಿದ್ದಾರೆ. ಆದರೆ ನಾನು ಕೇಳಿದಂತಹ ಪ್ರಶ್ನೆಗೆ ಸಂಪೂರ್ಣವಾದಂತಹ ಉತ್ತರವನ್ನು ನೀಡಿಲ್ಲ. ಏನಾಗುತ್ತದೆ ಅಂದರೆ ಬೇನಾಮಿ ಹೆಸರಿನಲ್ಲಿ ಅಡ್ಮಿಷನ್ ರಿಜಿಸ್ಟರ್‌ನಲ್ಲಿ ವಿದ್ಯಾರ್ಥಿಗಳ ಹೆಸರು ಇರುತ್ತದೆ. ಆದರೆ ಅವರು ಟ್ರೈನಿಂಗ್ ಪಡೆದಿರುವುದಿಲ್ಲ. ಹಾಗೆಯೇ ಅವರು ಅನುದಾನವನ್ನೂ ಕೂಡ ಕ್ಲೈಮ್ ಮಾಡುತ್ತಿದ್ದಾರೆ. ಈ ತರಹ ನಮ್ಮ ತಾಲ್ಲೂಕಿನಲ್ಲಿ ಕೂಡ ಆಗಿದೆ. ಅದರ ಬಗ್ಗೆ ನನ್ನಲ್ಲಿ ದಾಖಲೆ ಕೂಡ ಇದೆ. ಈ ಉಸ್ತುವಾರಿ ಸಮಿತಿ ಎಂದು ಹೇಳಿ ಏನು ಮಾಡಿದ್ದಾರೆ, ಇವು ಕೂಡ ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ. ಅದಕ್ಕೆ ಹೆಚ್ಚಿನ ತಾಕೀತು ಮಾಡಬೇಕಾಗುತ್ತದೆ. ಈ ಬೇನಾಮಿ ಹೆಸರಿನಲ್ಲಿ ಸ್ಟೂಡೆಂಟ್ಸ್ ಟ್ರೈನಿಂಗ್‌ಗೆ ಅಡ್ಮಿಟ್ ಆಗುತ್ತಾರೆ, ಅದರ ಬಗ್ಗೆ ಹೆಚ್ಚಿನ ಕ್ರಮ ಮಾಡಬೇಕು.

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :- (ಮಾನ್ಯ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖಾ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಪ್ರತಿ ಕ್ಷೇತ್ರಕ್ಕೆ ಒಂದರಂತೆ 234 ಯುವ ಡಾಟ್ ಕಾಮ್‌ಗಳು ಇವೆ ಇವತ್ತಿನ ತನಕ ಸರ್ಕಾರಕ್ಕೆ ಯಾವುದೇ ಡಾಟ್ ಕಾಮ್ ಬಗ್ಗೆ ದುರ್ವ್ಯವಹಾರ ಆಗಿರುವ ಬಗ್ಗೆ ಮನವಿ ಬಂದಿಲ್ಲ. ಅಥವಾ ಸರ್ಕಾರದ ಗಮನಕ್ಕೆ ಬಂದಿಲ್ಲ. ಆದರೆ ಮಾನ್ಯ ಗೌರವಾನ್ವಿತ ಸದಸ್ಯರು ಅವರ ಕ್ಷೇತ್ರದಲ್ಲಿ ದುರ್ವ್ಯವಹಾರ ಆಗಿದೆ ಎಂದು ಹೇಳುತ್ತಾರೆ. ಆ ಕಾಗದಪತ್ರಗಳನ್ನು ಕಳುಹಿಸಿದರೆ ತಕ್ಷಣ ಅದರ ಬಗ್ಗೆ ಎನ್‌ಕ್ವೈರಿ ಮಾಡಲು ಆರ್ಡರ್ ಮಾಡುತ್ತೇವೆ. ಇವತ್ತು

ಸರ್ಕಾರ ಈಗಾಗಲೇ ಸಾಧಾರಣ 82 ಸಾವಿರದ 425 ಜನರಿಗೆ ನಾವೀಗ 234 ಡಾಟ್ ಕಾಮ್ ಮುಖಾಂತರ ತರಬೇತಿ ಕೊಟ್ಟಿದ್ದೇವೆ. ಅದರಲ್ಲಿ ಸಾಧಾರಣ 30 ಸಾವಿರದ ಮೇಲೆ ಸರ್ಟಿಫಿಕೇಟ್ ಕೊಟ್ಟಿದ್ದೇವೆ. ಒಂದು ವೇಳೆ ನೇರವಾಗಿ ದೂರು ಇದ್ದರೆ, ನಮ್ಮ ಗಮನಕ್ಕೆ ತಂದರೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಹಿರೇಕೆರೂರಿನಲ್ಲಿ ಕ್ರೀಡಾಂಗಣ ನಿರ್ಮಿಸುವ ಬಗ್ಗೆ

89 (637) ಶ್ರೀ ಬನ್ನಿಕೋಡ್ ಬಿ.ಹೆಚ್. (ಹಿರೇಕೆರೂರು) : ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕು ಕೇಂದ್ರವಾಗಿದ್ದರೂ ಕ್ರೀಡೆಗಳನ್ನು ನಡೆಸಲು ಸೂಕ್ತ ಮೈದಾನವಿಲ್ಲದೆ ಇರುವುದನ್ನು ಸರ್ಕಾರ ಅರಿತಿದೆಯೇ?

ಆ) ತಾಲ್ಲೂಕಿನಲ್ಲಿರುವ ಕ್ರೀಡಾಳುಗಳಿಗೆ ಸೂಕ್ತ ಸ್ಥಳಾವಕಾಶವನ್ನು ಮಾಡಿಕೊಡುವುದು ಸರ್ಕಾರದ ಆದ್ಯ ಕರ್ತವ್ಯವಾಗಿರುವುದಿಲ್ಲವೇ?

ಇ) ಹಾಗಿದ್ದರೆ, ತಾಲ್ಲೂಕಿಗೆ ಕ್ರೀಡಾ ಮೈದಾನ ಒದಗಿಸಲು ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು):

ಅ) ಹೌದು.

ಆ) ಹೌದು.

ಇ) ಕ್ರೀಡಾಂಗಣ ನಿರ್ಮಾಣಕ್ಕಾಗಿ ಸೂಕ್ತ ನಿವೇಶನ ಪಡೆಯಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಬಿ.ಎಚ್. ಬನ್ನಿಕೋಡ್:- ಮಾನ್ಯ ಅಧ್ಯಕ್ಷರೆ, ಈ ತಾಲ್ಲೂಕು ಕ್ರೀಡಾಂಗಣಕ್ಕೆ ಅವಶ್ಯ ಇರುವಂತಹ ಜಮೀನನ್ನು ಒದಗಿಸಲಿಕ್ಕೆ ಅಲ್ಲಿ ಯಾವುದೇ ಸರ್ಕಾರೀ ಜಮೀನು ಇಲ್ಲ. ಭೂ ಸ್ವಾಧೀನ ಮಾಡಿಕೊಂಡು ಕೂಡಲೇ ಆ ಒಂದು ಜಮೀನಿನಲ್ಲಿ ಕ್ರೀಡಾಂಗಣ ಮಾಡಲಿಕ್ಕೆ ಸರ್ಕಾರ ಏನಾದರೂ ಕ್ರಮ ತೆಗೆದುಕೊಳ್ಳುತ್ತದೆಯೇ ಎಂಬ ಪ್ರಶ್ನೆಯನ್ನು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳುತ್ತಿದ್ದೇನೆ.

ಶ್ರೀ ಎಂ. ದಿವಾಕರ ಬಾಬು (ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರ ಪರವಾಗಿ):- ಮಾನ್ಯ ಅಧ್ಯಕ್ಷರೆ, ಅಲ್ಲಿ ಜಮೀನು ಲಭ್ಯ ಇಲ್ಲ ಎಂಬುದು ನಿಜ. ಸರ್ಕಾರ ಜಮೀನಿಗಾಗಿ ನೋಡುತ್ತಿದ್ದೇವೆ. ಈಗ ಹಣಕಾಸಿನ ಲಭ್ಯತೆ ಸಾಧಾರಣ ಬಹಳಷ್ಟು ತೊಂದರೆ ಇರುವ ಕಾರಣ ಮುಂದೆ ಈ ಜಮೀನಿನ ಅಕ್ವಿಸಿಷನ್ ಮಾಡಿ ಈ ಕ್ರೀಡಾಂಗಣ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಮುದ್ದೇನಹಳ್ಳಿ ಹಾಗೂ ನಿಸರ್ಗಧಾಮ ರಂಗಧಾಮ ಚಾನಲ್ ಹತ್ತಿರ ಪ್ರವಾಸಿ ಕೇಂದ್ರವನ್ನು ಪ್ರಾರಂಭಿಸುವುದು.

91 (1070) ಶ್ರೀಮತಿ ಅನುಸೂಯಮ್ಮ ನಟರಾಜನ್ ಕೆ.ವಿ. (ಚಿಕ್ಕಬಳ್ಳಾಪುರ) : ಮಾನ್ಯ ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?